# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 04.05.2019**

## ರೆಸೆಲ್ ಮಾರುಕಟ್ಟೆ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಬೃಹತ್ ಕಾರ್ಯಾಚರಣೆ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಇಂದು ಮುಂಜಾನೆಯಿಂದ ರೆಸೆಲ್ ಮಾರುಕಟ್ಟೆ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಬೃಹತ್ ಕಾರ್ಯಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು.

ಸದರಿ ಕಾರ್ಯಾಚರಣೆಯನ್ನು ಇಂದು ಮುಂಜಾನೆಯಿಂದ ಪ್ರಾರಂಭಿಸಲಾಗಿದ್ದು, ನಾಲ್ಕು ಜೆ.ಸಿ.ಬಿ ಯಂತ್ರಗಳು, ನಾಲ್ಕು ಕಾಂಪ್ಯಾಕ್ಟರ್, 8 ಟಿಪ್ಪರ್‌ಗಳು, 12 ಟ್ರ್ಯಾಕ್ಟರ್‌ಗಳು ಸುಮಾರು 700 ಜನ ಸಿಬ್ಬಂದಿಗಳು ಕಾರ್ಯಾಚರಣೆ ಪ್ರಾರಂಭಿಸಿ, ರೆಸೆಲ್ ಮಾರುಕಟ್ಟೆ ಒಳ ಭಾಗದ ಮೀನು ಮಾರುಕಟ್ಟೆಯ 5 ಅನಧಿಕೃತ ಅಂಗಡಿಗಳನ್ನು ತೆರವು ಗೊಳಿಸಲಾಗಿದ್ದು, ತದನಂತರ ರೆಸೆಲ್ ಮಾರುಕಟ್ಟೆ ಸುತ್ತಮುತ್ತ ಪ್ರದೇಶಗಳಲ್ಲಿ ಫುಟ್‌ಫಾತ್ ಒತ್ತುವರಿ ಅಂಗಡಿ ಮುಂಭಾಗದಲ್ಲಿ ಅಳವಡಿಸಲಾಗಿದ್ದ ಶೆಲ್ಟರ್ ಅನಧಿಕೃತ Structureಗಳನ್ನು ತೆರವುಗೊಳಿಸಲಾಯಿತು, ನಂತರ OPH ರಸ್ತೆ, ಶಿವಾಜಿ ರಸ್ತೆ, Broadway ರಸ್ತೆ, Steephen ಮಾರುಕಟ್ಟೆ (ಗುಜರಿ)ಯ ರಸ್ತೆ ಒತ್ತುವರಿಯನ್ನು ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ಸದರಿ ಕಾರ್ಯಾಚರಣೆಯಲ್ಲಿ ಬೆಸ್ಕಾಂ, ಬಿಡಬ್ಲ್ಯೂಎಸ್ಎಸ್‌ಬಿ, ಟ್ರಾಫಿಕ್, ಪೋಲಿಸ್ ವಿಭಾಗದ ಹಿರಿಯ ಅಧಿಕಾರಿಗಳು ತಮ್ಮ ವಿಭಾಗದ ಅಧೀನ ಅಧಿಕಾರಿ/ಸಿಬ್ಬಂದಿಗಳೊಂದಿಗೆ ಹಾಜರಾಗಿ ಸದರಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು, ಸುಮಾರು 70 ಮಾರ್ಷಲ್‌ಗಳು, ಅಲ್ಲದೇ ನಿವೃತ್ತ ಮಿಲಿಟರಿ ಅಧಿಕಾರಿಗಳು ಭಾಗವಹಿಸಿದ್ದರು, ಸದರಿ ಕಾರ್ಯಾಚರಣೆಯಲ್ಲಿ ಸುಮಾರು 40 ಲೋಡ್‌ಗಳಷ್ಟು ಅನಧಿಕೃತ ವಸ್ತುಗಳನ್ನು ಸಾಗಿಸಲಾಗಿದೆ. ಅಲ್ಲದೇ ರೆಸೆಲ್ ಮಾರುಕಟ್ಟೆ ಮುಂಭಾಗದ ಪಾರ್ಕಿಂಗ್ ಸ್ಥಳವನ್ನು ತೆರವುಗೊಳಿಸಿ ಅಗ್ನಿಶಾಮಕ ವಾಹನ ನಿಲುಗಡೆಗೆ ಸ್ಥಳವಕಾಶ ಮಾಡಿಕೊಡಲಾಗಿದೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**


BULL













